ದಿನಾಂಕಃ **21.11.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲುಃ ಶ್ರೀ ಡಿ ಕೆ ಕೆ ವಕೀಲರಿಂದಃ-

ಸರ್ವೆ ನಂ 52 ರಲ್ಲಿ ಒಟ್ಟು 40 ಎಕರೆ ಜಮೀನು ಇರುತ್ತದೆ. ಪ್ರತಿವಾದಿಗಳು ಸರ್ವೆ ನಂ 52 ರಲ್ಲಿ 4 ಎಕರೆ 8 ಗುಂಟೆ ಜಮೀನಿನ ಸ್ವಾದೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸ್ವಾದೀನ ಹೊಂದಿರುವ ಜಮೀನಿನ ಪೂರ್ವಕ್ಕೆ ಃ ಯರೇಹಳ್ಳಿ ಗ್ರಾಮದ ಶೇಖರಪ್ಪ ರವರ ಜಮೀನು, ಪಶ್ಚಿಮಕ್ಕೆ ಃ ಕರಿಬಸಪ್ಪ ಬಿನ್ ರಂಗಪ್ಪ ರವರ ಜಮೀನು, ಉತ್ತರಕ್ಕೆ ಃ ರಾಜಕುಮಾರ್ ರವರ ಜಮೀನು, ದಕ್ಷಿಣಕ್ಕೆ ಃ ಮಲ್ಲಪ್ಪ ರವರ ಕುಟುಬದ ಸ್ವತ್ತು ಇದೆ ಎಂದರೆ ಸರಿ. ಪ್ರತಿವಾದಿಗಳು 4 ಎಕರೆ 8 ಗುಂಟೆ ಜಮೀನಿನ ಸ್ವಾದೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. 1980-81 ರಿಂದ ಪ್ರತಿವಾದಿಗಳು 4 ಎಕರೆ 8 ಗುಂಟೆ ಜಮೀನಿನ ಸ್ವಾದೀನ ಹೊಂದಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು 4 ಎಕರೆ 8 ಗುಂಟೆ ಜಮೀನಿನ್ನು ಮಂಜೂರು ಮಾಡುವಂತೆ 1998-99 ರಲ್ಲಿ ಫಾರಂ ನಂ 53 ರಂತೆ ಅರ್ಜಿ ಸಲ್ಲಿಸಿದ್ದು ಸ್ವಾದೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅರ್ಜಿಯಂತೆ ರಾಜಸ್ವ ನಿರೀಕ್ಷಕರು ಗ್ರಾಮ ಲೆಕ್ಕಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ 2 ನೇ ಪ್ರತಿವಾದಿ 4 ಎಕರೆ 8 ಗುಂಟೆ ಜಮೀನಿನ ಸ್ವಾದೀನ ಹೊಂದಿರುತ್ತಾರೆ ಎಂದು ವರದಿ ಮತ್ತು ಸರ್ವೆ ನಕಾಶೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ 4 ಎಕರೆ 8 ಗುಂಟೆ ಜಮೀನು ಹೊರತುಪಡಿಸಿ ಬೇರೆ ಜಮೀನು ಇರುವುದಿಲ್ಲ ಎಂದರೆ ಸಾಕ್ಷಿ ಅವರಿಗೆ ಯಾವುದೇ ಜಮೀನು ಇರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಸ್ವಾದೀನ ಹೊಂದಿರುವ ಜಮೀನಿಗೆ ನಾನೇ ಅಡ್ಡಿಪಡಿಸಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು

ಹಾಜರುಪಡಿಸಿರುವ ದಾಖಲೆಯು ಹಂಗಾಮಿ ಸಾಗುವಳಿ ಚೀಟಿ ಎಂದರೆ ಸರಿ. ನಿಪಿ-1 ರ ಪಹಣಿಯಲ್ಲಿ ಹಂಗಾಮಿ 5 ವರ್ಷ ಲೀಸ್ ಎಂದು ಇದೆ ಎಂದರೆ ಸರಿ. ನನಗೆ ಸರ್ಕಾರದಿಂದ ಯಾವುದೇ ಜಮೀನು ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ನನಗೆ ಮಂಜೂರಾದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಯಾವುದೇ ಮಂಜೂರು ದಾಖಲೆಯನ್ನು ಹಾಜರುಪಡಿಸದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಯಲ್ಲಿ ಭೂ ಮಂಜೂರಾತಿಯ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾದೀನವನ್ನು ನಾನು ಯಾವತ್ತೂ ಹೊಂದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು 4 ಎಕರೆ 8 ಗುಂಟೆ ಜಮೀನಿನ ಸ್ವಾದೀನ ಹೊಂದಿದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.